ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗೆ ಆಯ್ಕೆ ಮಾಡುವುದು

೫೫೮. ಶ್ರೀ ಶಿವಸಂಗಪ್ಪ ಸಿದ್ದಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬೆರಳಚ್ಚುಗಾರರ ಹಾಗೂ ಶೀಘ್ರಲಿಪಿಗಾರರನ್ನು ಅವರು ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಅಂತಹ ಬೆರಳಚ್ಚುಗಾರರ ಹಾಗೂ ಶೀಘ್ರಲಿಪಿಗಾರರ ಪಟ್ಟಿಯನ್ನು ಪ್ರತಿ ವಿಭಾಗದಲ್ಲಿ ಅವರ ಅಂಕಗಳ ಆಧಾರದ ಮೇಲೆ ಮಾಡಿದಲ್ಲಿ ರಾಜ್ಯದ ಎಲ್ಲಾ ವಿಭಾಗಗಳಿಗೂ ಯೋಗ್ಯ ಪ್ರಾತಿನಿಧ್ಯ ಕೊಟ್ಟಂತೆ ಆಗುವುದಿಲ್ಲವೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

ಅ) ದಿನಾಂಕ ೭-೪-೧೯೬೭ರ ಅಧಿಸೂಚನೆ ಡಿಪಿಎಆರ್ ೨೫ ಎಸ್‌ಸಿಆರ್ ೬೭ರಲ್ಲಿ ಬೆರಳಚ್ಚುಗಾರರ ಮತ್ತು ಶೀಘ್ರಲಿಗಾರರ ಹುದ್ದೆಗೆ ಅಭ್ಯರ್ಥಿಗಳನ್ನು ಅರ್ಹತಾ ಪರೀಕ್ಷೆಯಲ್ಲಿ ಅವರು ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲು ಅವಕಾಶವನ್ನು ಮಾಡಲಾಗಿದೆ.

ಆ) ಎಲ್ಲಾ ಗ್ರೂಪ್ 'ಸಿ' ಹುದ್ದೆಗಳನ್ನು ವಿಭಾಗವಾರು ವೃಂದಗಳನ್ನಾಗಿ ರೂಪಿಸುವ ವಿಷಯವು ಪ್ರತ್ಯೇಕವಾಗಿ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ಹಾಲಿ ಇರುವ ರೇಷನ್ ಅಂಗಡಿಗಳ ಕುರಿತಂ

೫೫೯. ಶ್ರೀ ಗೋಪಾಲ ಮಂಕುಂದ ಕಾನಡೆ (ಸಿರ್ಸಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಾಲಿ ಇರುವ ನ್ಯಾಯಬೆಲೆ ಅಂಗಡಿಗಳು ಎಷ್ಟು ಅವುಗಳಲ್ಲಿ ಸಹಕಾರಿ ಸಂಘಗಳು ನಡೆಸುತ್ತಿರುವ ಅಂಗಡಿಗಳು ಎಷ್ಟು, ನಿರುದ್ಯೋಗಿ ಯುವಕರು ನಡೆಸುತ್ತಿರುವ ಅಂಗಡಿಗಳೆಷ್ಟು ಹಾಗೂ ಹರಿಜನ-ಗಿರಿಜನರೆಷ್ಟು ?

ಆ) ಖಾಸಗಿ ಕಿರಾಣಿ ವ್ಯಾಪಾರಿಗಳಿಗೆ ನ್ಯಾಯಬೆಲೆ ಅಂಗಡಿ ನಡೆಸಲು ಪರವಾನಿಗೆ ನೀಡಲಾಗಿದೆಯೇ ನೀಡದಿದ್ದಲ್ಲಿ ಅವರ ಹೆಸರು, ವಿಳಾಸಗಳ ವಿವರ ಒದಗಿಸುವುದು ?

ಇ) ಖಾಸಗಿ ಕಿರಾಣಿ ವ್ಯಾಪಾರಸ್ಥರು ನ್ಯಾಯಬೆಲೆ ಅಂಗಡಿ ಹೆಸರಿನಲ್ಲಿ ಅವ್ಯವಹಾರ ಮಾಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ? ಬಂದಿದ್ದಲ್ಲಿ ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಆಹಾರ ಮಂತ್ರಿ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಗಳು).-

ಅ) ಮತ್ತು ಆ) "ಈ ಪ್ರಶ್ನೆಗಳಿಗೆ ವಿವರಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳಿಂ ಹಾಗೂ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳಿಂದ ಪಡೆಯಬೇಕಾಗಿರುವುದರಿಂದ ಸಧ್ಯಕ್ಕೆ ವಿವರಗಳು ಇಲ್ಲದೆ ಇರುವುದರಿಂದ ಈ ವಿವರಗಳನ್ನು ಅವರಿಂದ ಪಡೆದು ಶೀಘ್ರದಲ್ಲಿ ಒದಗಿಸಲಾಗುವುದು."

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳನ್ನು ಖರೀದಿಮಾಡಿದ ಬಗ್ಗೆ

೫೬೦. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೬೬-೬೭ ಮತ್ತು ೧೯೬೭-೬೮ರಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಎಷ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಿದೆ ಹಾಗೂ ಅದಕ್ಕೆ ತಗುಲಿದ ವೆಚ್ಚ ಎಷ್ಟು ?

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಈಗ ಲಾಭದಲ್ಲಿ ನಡೆಯುತ್ತಿದೆಯೇ, ಅಥವಾ ನಷ್ಟದಲ್ಲಿ ನಡೆಯುತ್ತಿದೆಯೇ, (ಅದರ ವಿವರಗಳನ್ನು ಒದಗಿಸುವುದು).

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ) ೧೯೮೬-೮೭ನೇ ಆರ್ಥಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ೫೮.೦೮ ಕೋಟಿ ರೂ.ಗಳ ವೆಚ್ಚದಲ್ಲಿ ಹಳೇ ಬಸ್ಸುಗಳ ಬದಲಿಗಾಗಿ ೮೦೭ ಬಸ್ಸುಗಳನ್ನು ಮತ್ತು ಹೆಚ್ಚುವರಿ ಬಳಕೆಗಾಗಿ ೯೯ ಬಸ್ಸುಗಳು ಸೇರಿದಂತೆ ಒಟ್ಟು ೧೭೩೬ ಹೊಸ ವಾಹನಗಳನ್ನು ಖರೀದಿಸಿರುತ್ತದೆ.

೧೯೮೭-೮೮ನೇ ಸಾಲಿನಲ್ಲಿ ೪೧.೮೩ ಕೋಟಿ ರೂ. ಗಳ ವೆಚ್ಚದಲ್ಲಿ ೧೨೪೯ ಹೊಸ ವಾಹನಗಳನ್ನು ಖರೀದಿಸುವ ಯೋಜನೆಯನ್ನು ಸದರೀ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ನಿಗಧಿಪಡಿಸಲಾಗಿದೆ. ಸದರೀ ಸಾಲಿನ ಡಿಸೆಂಬರ್ ಅಂತ್ಯದ ವೇಳೆಗೆ ೯೭೨ ಹೊಸ ಬಸ್ಸುಗಳನ್ನು ಖರೀದಿಸಿರಂತ್ತದೆ. ಇದರ ಬಾಬ್ತು ೩೨.೫೬ ಕೋಟಿ ರೂ.ಗಳಾಗಿರುತ್ತದೆ.

ಆ) ೧೯೭೫-೭೬ನೇ ಸಾಲಿನಿಂದಲೂ (೧೯೭೬-೭೭ರ ವಿನಃ ಸಂಸ್ಥೆಯು ನಷ್ಟವನ್ನು ಅನುಭವಿಸಿರುತ್ತದೆ. ೧೯೮೭-೮೮ನೇ ಸಾಲಿನ ಪರಿಷ್ಕೃತ ಅಂದಾಜಿನ ಪ್ರಕಾರ ೧೧.೪೯ ಕೋಟಿ ರೂ.ಗಳು ನಷ್ಟ ಸಂಭವಿಸಬಹುದೆಂದು ನಿರೀಕ್ಷಿಸಲಾಗಿದೆ.

ಧಾರವಾಡ ಜಿಲ್ಲೆಯಲ್ಲಿರುವ ಪೋಲೀಸ್ ಸೆಂಟರನ್ನು ಮೂಗೋಡಿಗೆ ವರ್ಗಾಯಿಸಿರುವುದು

೩೩೧. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ),—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಇದ್ದ ಪೋಲೀಸ್ ತರಬೇತಿ ಕೇಂದ್ರವನ್ನು ಮೂಗೋಡಿಗೆ ವರ್ಗಾಯಿಸಿರುವುದಕ್ಕೆ ಕಾರಣಗಳೇನು ?

ಆ) ಮೂಗೋಡಿನಲ್ಲಿನ ಕೇಂದ್ರದ ಕಟ್ಟಡಕ್ಕೆ ನೀಡುತ್ತಿದ್ದ ಬಾಡಿಗೆ ಹಾಗೂ ರಾಯಾಪುರದಲ್ಲಿ ಕೊಡುತ್ತಿದ್ದ ಬಾಡಿಗೆ ಹಣದ ಮೊತ್ತವೆಷ್ಟು ?

ಇ) ಈ ತರಬೇತಿ ಕೇಂದ್ರದಲ್ಲಿರುವ ಸಬ್‌ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು ? ಅದರಲ್ಲಿ ಈ ಸಾಲಿನಲ್ಲಿ ನಿವೃತ್ತಿ ಹೊಂದಲಿರುವವರೆಷ್ಟು ? ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರ ಸಂಖ್ಯೆ ಎಷ್ಟು ?

ಈ) ರಾಯಾಪುರದಲ್ಲಿ ವರ್ಷದಲ್ಲಿ ತರಬೇತಿ ಕೊಡುತ್ತಿದ್ದ ಅವಧಿ ಎಷ್ಟು, ಹಾಗೂ ಮೂಗೋಡಿನಲ್ಲಿ ತರಬೇತಿ ಅವಧಿ ಎಷ್ಟು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಸಚಿವರು).—

ಅ) ಧಾರವಾಡ ಜಿಲ್ಲೆ ರಾಯಾಪುರದಲ್ಲಿದ್ದ ಪೋಲೀಸ್ ತರಬೇತಿ ಶಾಲೆಯು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ನೀಡಲು ಅನಾನುಕೂಲವಾದ್ದರಿಂದ ಅದನ್ನು ಮೂಗೋಡಿಗೆ ವರ್ಗಾಯಿಸಲಾಯಿ ೦.

ಆ) ಮೂಗೋಡಿನಲ್ಲಿ ಕೊಡುತ್ತಿರುವ ವಾರ್ಷಿಕ ಬಾಡಿಗೆ ರೂ. ೩೨,೫೬,೩೬೦-೦೦, ರಾಯಾಪುರದಲ್ಲಿ ಕೊಡುತ್ತಿರುವ ವಾರ್ಷಿಕ ಬಾಡಿಗೆ ರೂ. ೯೩,೪೨೫-೦೦.

ಇ) ಮೂಗೋಡಿನಲ್ಲಿ ಹಾಲಿ ೧೦ ಜನ ಸಬ್‌ಇನ್ಸ್‌ಪೆಕ್ಟರ್‌ಗಳು ಕೆಲಸದಲ್ಲಿದ್ದಾರೆ. ಇವರಲ್ಲಿ ಒಬ್ಬರು ಪರಿಶಿಷ್ಟ ಜಾತಿಗೆ ಸೇರಿದವರು ಮತ್ತೊಬ್ಬರು ಪರಿಶಿಷ್ಟ ವರ್ಗಕ್ಕೆ ಸೇರಿದವರು. ಈ ಸಾಲಿನಲ್ಲಿ ಒಬ್ಬರು ಸಬ್ ಇನ್ಸ್‌ಪೆಕ್ಟರ್ ಮಾತ್ರ ೩೧-೧-೮೮ಕ್ಕೆ ನಿವೃತ್ತಿ ಹೊಂದಿದ್ದಾರೆ, ಅವರು ಪರಿಶಿಷ್ಟ ಜಾತಿಗೆ ಸೇರಿದವರು.

ಈ) ಎರಡೂ ಕಡೆಯೂ ತರಬೇತಿ ಅವಧಿ ೯ ತಿಂಗಳು.